**C**

**CCE PR**
**REVISED**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಸೆಪ್ಟೆಂಬರ್, 2020**

**S.S.L.C. EXAMINATION, SEPTEMBER, 2020**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 25. 09. 2020 ] **ಸಂಕೇತ ಸಂಖ್ಯೆ : 62-K**

Date : 25. 09. 2020 ] **CODE No. : 62-K**

## ವಿಷಯ : ತೃತೀಯ ಭಾಷೆ — ಕನ್ನಡ

## Subject : Third Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I. | **ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 10 × 1 = 10 |
| 1. | ಕೆಳಗಿನವುಗಳಲ್ಲಿ ವಿಜಾತೀಯ ಸಂಯುಕ್ತಾಕ್ಷರವುಳ್ಳ ಪದ<br>(ಎ) ಸಜ್ಜನ (ಬಿ) ಉನ್ನತ<br>(ಸಿ) ಆಶ್ರಯ (ಡಿ) ಅಪ್ಪಣೆ<br>***ಉತ್ತರ :*** (ಸಿ) ಆಶ್ರಯ | |
| 2. | ವಿದ್ಯಾರ್ಥಿಗಳು ಶಾಲೆಯಲ್ಲಿ 'ವಿಶ್ವ ಪರಿಸರ' ದಿನಾಚರಣೆಯನ್ನು ಆಚರಿಸಿದರು. – ಈ ವಾಕ್ಯದಲ್ಲಿ ಸಪ್ತಮೀ ವಿಭಕ್ತಿಯಿಂದ ಕೂಡಿದ ಪದ<br>(ಎ) ದಿನಾಚರಣೆಯನ್ನು (ಬಿ) ವಿಶ್ವ ಪರಿಸರ<br>(ಸಿ) ಶಾಲೆಯಲ್ಲಿ (ಡಿ) ವಿದ್ಯಾರ್ಥಿಗಳು<br>***ಉತ್ತರ :*** (ಸಿ) ಶಾಲೆಯಲ್ಲಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | ಬರವಣಿಗೆಯಲ್ಲಿ ಹರ್ಷ, ಅಚ್ಚರಿ, ದುಃಖ, ಕೋಪ ಇತ್ಯಾದಿ ಭಾವನೆಗಳನ್ನು ವ್ಯಕ್ತಪಡಿಸುವಾಗ ಬಳಸುವ ಲೇಖನ ಚಿಹ್ನೆಯನ್ನು ಹೀಗೆಂದು ಕರೆಯುತ್ತಾರೆ<br>(ಎ) ಪೂರ್ಣವಿರಾಮ (ಬಿ) ಭಾವಸೂಚಕ<br>(ಸಿ) ಉದ್ಧರಣ (ಡಿ) ಪ್ರಶ್ನಾರ್ಥಕ<br>***ಉತ್ತರ :*** (ಬಿ) ಭಾವಸೂಚಕ | |
| 4. | 'ಪರಿಚಿತ' ಪದದ ವಿರುದ್ಧ ಪದ<br>(ಎ) ಅಪರಿಚಿತ (ಬಿ) ಸುಪರಿಚಿತ<br>(ಸಿ) ಕುಪರಿಚಿತ (ಡಿ) ಪರಾಜಿತ<br>***ಉತ್ತರ :*** (ಎ) ಅಪರಿಚಿತ | |
| 5. | 'ಪ್ರಣತಿ' ಪದದ ತದ್ಭವ ರೂಪ<br>(ಎ) ಪ್ರಣತೆ (ಬಿ) ಆರತಿ<br>(ಸಿ) ಜ್ಯೋತಿ (ಡಿ) ಹಣತೆ<br>***ಉತ್ತರ :*** (ಡಿ) ಹಣತೆ | |
| 6. | 'ಗೌರಿಯ ಮುಖ ಕಮಲದಂತೆ ಅರಳಿತು.' – ಈ ವಾಕ್ಯದಲ್ಲಿರುವ ಅಲಂಕಾರ<br>(ಎ) ಶಬ್ದಾಲಂಕಾರ (ಬಿ) ಉಪಮಾಲಂಕಾರ<br>(ಸಿ) ರೂಪಕಾಲಂಕಾರ (ಡಿ) ಚಿತ್ರಕವಿತ್ವ<br>***ಉತ್ತರ :*** (ಬಿ) ಉಪಮಾಲಂಕಾರ | |
| 7. | ಬೀಚಿಯವರು ತಮಗೆ ಓದಲು ಇನ್ನೂ ಆಗಿಲ್ಲವೆಂದು ಹೇಳಿರುವ ಶಿವರಾಮ ಕಾರಂತರ ಕೃತಿ<br>(ಎ) ಅಳಿದ ಮೇಲೆ (ಬಿ) ಮರಳಿ ಮಣ್ಣಿಗೆ<br>(ಸಿ) ಬೆಟ್ಟದ ಜೀವ (ಡಿ) ಮೂಕಜ್ಜಿಯ ಕನಸುಗಳು<br>***ಉತ್ತರ :*** (ಬಿ) ಮರಳಿ ಮಣ್ಣಿಗೆ | |
| 8. | ಜನಪದರ ಪ್ರಕಾರ ಮೂಡಣದ ಮೋಡದ ಚೆಂದವು ಹೀಗಿದೆ<br>(ಎ) ಸಪ್ಪೆದಂಟ್ಟಂಗೆ (ಬಿ) ಗೋಡೆಗೆ ಬಿಳಿಬಳಿದ್ದಂಗೆ<br>(ಸಿ) ಬೋರಾಡುವ್ವಂಗೆ (ಡಿ) ಗೋಡೆಗೆ ಕಪ್ಪುಬಳಿದ್ದಂಗೆ<br>***ಉತ್ತರ :*** (ಡಿ) ಗೋಡೆಗೆ ಕಪ್ಪುಬಳಿದ್ದಂಗೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 9. | ರಾಮಸಿಂಗ್‌ನಿಗೆ ಗುಂಡು ಹೊಡೆದು ಸಾಯಿಸಿದವನು<br>(ಎ) ಸೋಮಣ್ಣ (ಬಿ) ಕುಲಕರ್ಣಿ<br>(ಸಿ) ಶಿಪಾಯಿ (ಡಿ) ಡಿ.ಎಸ್.ಪಿ.<br>***ಉತ್ತರ :*** (ಬಿ) ಕುಲಕರ್ಣಿ | |
| 10. | 'ಮೀನು ನೀರಲ್ಲಿ ಈಜುತ್ತದೆ' – ಇದು ಈ ವಾಕ್ಯಕ್ಕೆ ಉದಾಹರಣೆಯಾಗಿದೆ<br>(ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ<br>(ಸಿ) ಮಿಶ್ರ ವಾಕ್ಯ (ಡಿ) ಸಮ್ಮಿಶ್ರ ವಾಕ್ಯ<br>***ಉತ್ತರ :*** (ಎ) ಸಾಮಾನ್ಯ ವಾಕ್ಯ | |
| II. | **ಸಂಬಂಧೀಪದ ಬರೆಯುವುದು (ಪ್ರತೀ ಸರಿಯುತ್ತರಕ್ಕೆ 1 ಅಂಕ) :** | $5 \times 1 = 5$ |
| 11. | ಸತ್ಯವ ನುಡಿವುದು : ದೇವಲೋಕ :: ಮಿಥ್ಯವ ನುಡಿವುದು : ......................... .<br>***ಉತ್ತರ :*** ಮರ್ತ್ಯಲೋಕ | |
| 12. | ಹಜರತ್ ಇಮಾಮ್ : ಹಾಜುಮ್ :: ಶರೀಫರು : ......................... .<br>***ಉತ್ತರ :*** ಫಾತಿಮಾ | |
| 13. | ಕುರ್ಚಿ : ಹಿಂದೂಸ್ತಾನಿ ಪದ :: ಕವರು : ......................... .<br>***ಉತ್ತರ :*** ಇಂಗ್ಲಿಷ್ ಪದ / ಆಂಗ್ಲ ಪದ | |
| 14. | ರವೀಂದ್ರ : ಸವರ್ಣದೀರ್ಘ ಸಂಧಿ :: ನರೇಂದ್ರ : ......................... .<br>***ಉತ್ತರ :*** ಗುಣ ಸಂಧಿ | |
| 15. | ಪಟಪಟ : ಅನುಕರಣಾವ್ಯಯ :: ಮನೆ–ಮಠ : ......................... .<br>***ಉತ್ತರ :*** ಜೋಡುನುಡಿ / ಜೋಡಿಪದ | |
| III. | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ (ವಾಕ್ಯ ರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | $5 \times 1 = 5$ |
| 16 | ಪೋರ್ಚುಗೀಸರು ವ್ಯಾಪಾರಕ್ಕಾಗಿ ಭಾರತಕ್ಕೆ ಏಕೆ ಬಂದರು ?<br>***ಉತ್ತರ :***<br>ಭಾರತದ ರೈತರು ಕಷ್ಟಪಟ್ಟು ಬೆಳೆದ ಏಲಕ್ಕಿ, ಅಕ್ಕಿ, ಮೆಣಸಿನಕಾಳು ಮತ್ತು ನೇಯ್ದ ಬಟ್ಟೆಯನ್ನು ಅಗ್ಗದ ಬೆಲೆಗೆ ಕೊಳ್ಳಲು ಪೋರ್ಚುಗೀಸರು ವ್ಯಾಪಾರಕ್ಕಾಗಿ ಭಾರತಕ್ಕೆ ಬಂದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 17. | ಎಂತಹ ಬಾಳನ್ನು ಕಟ್ಟುತ್ತೇವೆ ಎಂದು 'ಕಟ್ಟತೇವ ನಾವು' ಕವಿತೆಯು ಭರವಸೆ ನೀಡುತ್ತದ ?<br>***ಉತ್ತರ :***<br>ಜಾತಿ ಇಲ್ಲದ, ಭೀತಿ ಇಲ್ಲದ ಬಾಳನ್ನು ಕಟ್ಟುತ್ತೇವೆ ಎಂದು 'ಕಟ್ಟುತ್ತೇವ ನಾವು' ಕವಿತೆಯು ಭರವಸೆ ನೀಡುತ್ತದೆ. | |
| 18. | ಈರಪ್ಪ ಎಂ. ಕಂಬಳಿಯವರಿಗೆ ತಾವು ಆನೆಯಂಬಾರಿ ಏರಿದಂತೆ ಭಾಸವಾಗಲು ಕಾರಣವೇನು ?<br>***ಉತ್ತರ :***<br>ಈರಪ್ಪ ಎಂ. ಕಂಬಳಿಯವರು ತಾವು ಪ್ರಯಾಣಿಸುತ್ತಿದ್ದ ಬಸ್ಸಿನ ಟಾಪಿನ ಮೇಲೆ ಎಸೆದಿದ್ದ ಟಯರಿನ ಮೇಲೆ ಕುಳಿತಿದ್ದರಿಂದ ಆನೆಯಂಬಾರಿ ಏರಿದಂತೆ ಭಾಸವಾಯಿತು. | |
| 19. | ಪುಲಿಗೆರೆ ಸೋಮನಾಥನು ಪದ್ಯಗಳಲ್ಲಿ ಬಳಸಿರುವ ಅಂಕಿತ ಯಾವುದು ?<br>***ಉತ್ತರ :***<br>ಪುಲಿಗೆರೆ ಸೋಮನಾಥನು ಪದ್ಯಗಳಲ್ಲಿ 'ಹರಹರಾ ಶ್ರೀಚೆನ್ನಸೋಮೇಶ್ವರಾ' ಎಂಬ ಅಂಕಿತವನ್ನು ಬಳಸಿದ್ದಾನೆ. | |
| 20. | 'ಚಲೇಜಾವ್' ಚಳುವಳಿಯು ಯಾವ ವರ್ಷ ನಡೆಯಿತು ?<br>***ಉತ್ತರ :***<br>'ಚಲೇಜಾವ್' ಚಳುವಳಿಯು 1942ರಲ್ಲಿ ನಡೆಯಿತು. | |
| IV. | **ಮೂರು–ನಾಲ್ಕು ವಾಕ್ಯದಲ್ಲಿ ಉತ್ತರಿಸುವಿಕೆ :**<br>(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕ ನೀಡುವುದು) | $10 \times 2 = 20$ |
| 21. | ಗೊರೂರು ರಾಮಸ್ವಾಮಿ ಅಯ್ಯಂಗಾರರು ಮಿನಿಪೊಲೀಸ್ ನಗರದಲ್ಲಿ ಏಕೆ ದಾರಿ ತಪ್ಪಿಸಿಕೊಂಡರು ?<br>***ಉತ್ತರ :***<br>ಮಿನಿಪೊಲೀಸ್ ನಗರದಲ್ಲಿ ಮಿತ್ರರ ಕಾರಿನಿಂದ ಇಳಿದ ಗೊರೂರರು ಅಲ್ಲಲ್ಲಿ ಸುತ್ತುತ್ತ ದಾರಿ ತಪ್ಪಿಸಿಕೊಂಡರು. ಏಕೆಂದರೆ ನಗರದಲ್ಲಿ ದೀಪ ಹೊತ್ತಿದ ಮೇಲೆ ಅವರಿಗೆ ಅರಿವಿಲ್ಲದಂತೆ ಬಣ್ಣದ ಬಲ್ಬುಗಳು, ಕಮಾನುಗಳು, ದೀಪರಾಶಿ, ಕಿಟಕಿಗಳ ದೀಪಾಲಂಕಾರ ಇವುಗಳನ್ನೆಲ್ಲಾ ನೋಡುತ್ತ ಗೊತ್ತು ಮಾಡಿಕೊಂಡಿದ್ದ ಸ್ಥಳವನ್ನು ಬಿಟ್ಟು ಆಚೆ–ಈಚೆ ಹೋದರು. ನಂತರ ಏನು ಮಾಡಿದರೂ ಆ ಸ್ಥಳ ಗೊರೂರರಿಗೆ ಸಿಕ್ಕಲಿಲ್ಲ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 22. | ಕೊಡಗಿನ ಗೌರಮ್ಮನವರು ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಬಗೆಯನ್ನು ಕುರಿತು ಬರೆಯಿರಿ.<br>***ಉತ್ತರ :***<br>ರಾಜಕೀಯ ಪರಿಜ್ಞಾನವನ್ನು ಹೊಂದಿದ್ದ ಕೊಡಗಿನ ಗೌರಮ್ಮನವರು ಗಾಂಧೀಜಿಯವರ ಅನುಯಾಯಿಯಾಗಿದ್ದರು. ಸ್ವಾತಂತ್ರ್ಯ ಚಳುವಳಿಯಲ್ಲಿ ತೀವ್ರವಾದ ಆಸಕ್ತಿಯನ್ನು ಹೊಂದಿದ್ದ ಅವರು ಖಾದಿ ಬಟ್ಟೆಗಳನ್ನು ಧರಿಸುತ್ತಿದ್ದರು. ಗಾಂಧೀಜಿಯವರ ಸ್ವಾತಂತ್ರ್ಯ ಸಂಗ್ರಾಮ ಮತ್ತು ಹರಿಜನೋದ್ಧಾರ ಸಂಬಂಧ ನಿಧಿಗೆ ತನ್ನ ಮಂಗಳಸೂತ್ರ, ಕಿವಿಯ ಓಲೆ, ಮೂಗುಬೊಟ್ಟಿನ ಹೊರತಾಗಿ ಉಳಿದೆಲ್ಲಾ ಒಡವೆಗಳನ್ನು ನೀಡಿದರು. ಈ ಮೂಲಕ ಗೌರಮ್ಮನವರು ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. | |
| 23. | ವಿದೇಶಿ ಪ್ರವಾಸಿಯು ರಾಣಿ ಅಬ್ಬಕ್ಕರನ್ನು ಕುರಿತು ಏನೆಂದು ಬರೆದಿದ್ದಾನೆ ?<br>***ಉತ್ತರ :***<br>ವಿದೇಶಿ ಪ್ರವಾಸಿಯಾದ ಜಿನೋವಾದ ಪಿತ್ರೋ, ರಾಣಿ ಅಬ್ಬಕ್ಕದೇವಿಯನ್ನು ಕುರಿತು 'ಅನ್ಯಾಯವಾಗಿ ಪೋರ್ಚುಗೀಸರು ಪಡೆಯುತ್ತಿದ್ದ ವಾರ್ಷಿಕ ಕಪ್ಪವನ್ನು ವಿರೋಧಿಸಿದಳು. ಅವರ ಆರ್ಥಿಕ ಶೋಷಣೆಗೆ ತಲೆಬಾಗದ ಸ್ವಾಭಿಮಾನಿ ರಾಣಿ ಅಬ್ಬಕ್ಕದೇವಿಯು ವಿವೇಚನಾಶೀಲಳೂ, ನ್ಯಾಯಪರಳೂ, ಕುಶಲಳೂ ಆಗಿದ್ದಳು. ಅಲ್ಲದೆ ವಿಶ್ವವಿಖ್ಯಾತರಾದ ನಿಮ್ಮನ್ನು ನೋಡಲು ಅಷ್ಟು ದೂರದಿಂದ ಬಂದದ್ದು ಸಾರ್ಥಕವಾಯಿತು ಎಂದಾಗ ರಾಣಿಯು ಅಪರಿಚಿತವಾದ ಈ ದೇಶದಲ್ಲಿ ಸುತ್ತಾಡುವಾಗ ಏನಾದರೂ ರೋಗ–ರುಜಿನ ಬಂದರೆ ಒಬ್ಬಂಟಿಗರಾದ ನಿಮ್ಮನ್ನು ನೋಡುವವರ್ಯಾರು ? ಎಂದು ಸ್ತ್ರೀ ಸಹಜವಾದ ವಾತ್ಸಲ್ಯದಿಂದ ವಿಚಾರಿಸಿಕೊಂಡಳೆಂದು' ಬರೆದಿದ್ದಾನೆ. | |
| 24. | ಕಿತ್ತೂರು ಚೆನ್ನಮ್ಮ ಸೆರೆಯಾದುದೇಕೆ ?<br>***ಉತ್ತರ :***<br>ಕಿತ್ತೂರು ಚೆನ್ನಮ್ಮ ಬಲಾಢ್ಯ ಬ್ರಿಟಿಷರನ್ನು ಸೋಲಿಸಿದಳು. ಆದರೆ ಬ್ರಿಟಿಷರ ಕುತಂತ್ರದಿಂದ ರಾಣಿ ಚೆನ್ನಮ್ಮ ಸೆರೆಯಾಗಬೇಕಾಯಿತು. ಏಕೆಂದರೆ ಬ್ರಿಟಿಷರು ರಾಣಿಯ ಹಿತಶತ್ರುಗಳೊಂದಿಗೆ ಸೇರಿ, ಪಿತೂರಿ ನಡೆಸಿ, ಯುದ್ಧದ ಸಮಯದಲ್ಲಿ ಮದ್ದಿನಲ್ಲಿ ಸಗಣಿ ಸೇರಿಸಿ, ರಾಣಿ ಚೆನ್ನಮ್ಮಳ ತೋಪು ಹಾರದಂತೆ ಮಾಡಿದರು. ಹೀಗೆ ಮೋಸ ಮಾಡಿ ರಾಣಿ ಚೆನ್ನಮ್ಮ ಬ್ರಿಟಿಷರ ಸೆರೆಯಾಗುವಂತೆ ಮಾಡಿದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 25. | ಬೆಳಕಿನ ಸತ್ವ ಮತ್ತು ರಸಕವಿತ್ವ ಒಂದೇ ಎನ್ನುವುದಕ್ಕೆ ನಿಸಾರ್ ಅಹಮದ್‌ರವರು ನೀಡಿರುವ ನಿದರ್ಶನಗಳಾವುವು ?<br><br>***ಉತ್ತರ :***<br><br>ಬೆಳಕು ಹಲವಾರು ರೂಪಗಳಲ್ಲಿ ಪ್ರಕಟಗೊಳ್ಳುತ್ತವೆ. ಅಂತೆಯೇ ಬಾಣ, ಬಿರುಸು, ಕುಂಡ, ಹಣತೆಗಳಲ್ಲಿನ ಬೆಳಕು ಬೆಳಕಿನ ಬೇರೆ ಬೇರೆ ರೂಪಗಳಾಗಿವೆ. ಆದರೆ ಬೆಳಕಿನ ಸತ್ವ ಒಂದೇ ಆಗಿದೆ. ಅದರಂತೆಯೇ ಸಾಹಿತ್ಯದಲ್ಲೂ ಹಲವಾರು ಪ್ರಕಾರಗಳಿವೆ. ಕಂದ, ವೃತ್ತ, ತ್ರಿಪದಿ, ವಚನ ಇವು ಸಾಹಿತ್ಯದ ಬೇರೆ ಬೇರೆ ಪ್ರಕಾರಗಳಾಗಿವೆ. ಆದರೆ ರಸಕವಿತ್ವ ಒಂದೇ ಆಗಿದೆ ಎಂದು ಕವಿ ನಿಸಾರ್ ಅಹಮದ್ ಅವರು ಬೆಳಕಿನ ಸತ್ವ ಮತ್ತು ರಸಕವಿತ್ವ ಒಂದೇ ಎನ್ನುವುದಕ್ಕೆ ನಿದರ್ಶನಗಳನ್ನು ನೀಡಿದ್ದಾರೆ. | |
| 26. | ಭೌಗೋಳಿಕವಾಗಿ ಭಾರತೀಯರೆಲ್ಲಾ ಒಂದೇ ಎಂದು ನಿಸಾರ್ ಅಹಮದ್ ಅವರು ಹೇಗೆ ನಿರೂಪಿಸಿದ್ದಾರೆ ?<br><br>***ಉತ್ತರ :***<br><br>ಭೌಗೋಳಿಕವಾಗಿ ಭಾರತವು ಅನೇಕ ರಾಜ್ಯಗಳಿಂದ ಕೂಡಿದ ವಿಶಾಲವಾದ ದೇಶ. ಕರ್ನಾಟಕ, ವಂಗ, ಆಂಧ್ರ ಭಾರತದ ಬೇರೆ ಬೇರೆ ರಾಜ್ಯಗಳಾಗಿವೆ. ಹೀಗೆ ಭಾರತದ ಬೇರೆ ಬೇರೆ ಪ್ರದೇಶದವರಾದರೂ ನಾವೆಲ್ಲ ಭಾರತೀಯರು ಒಂದೇ ಎಂಬ ಮನೋಭಾವನೆಯನ್ನು ಹೊಂದಿದ್ದೇವೆ. ಹೇಗೆ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ದಿಕ್ಕುಗಳಲ್ಲಿ ಬೀಸುವ ಗಾಳಿ, ಹರಡಿರುವ ಮುಗಿಲು ಒಂದೇ ಆಗಿದೆಯೋ ಹಾಗೆಯೇ ಭಾರತದ ಬೇರೆ ಬೇರೆ ಪ್ರದೇಶದವರಾಗಿದ್ದರೂ ನಾವೆಲ್ಲ ಭಾರತೀಯರೂ ಒಂದೇ ಎಂದು ಕವಿ ನಿಸಾರ್ ಅಹಮದ್ ಅವರು ನಿರೂಪಿಸಿದ್ದಾರೆ. | |
| 27. | ಕವಿ ಸಿ.ಪಿ.ಕೆ.ಯವರು ಗ್ರಂಥಾಲಯವನ್ನು ಹೊಕ್ಕೊಡನೆಯೇ ಆದ ಅನುಭವವನ್ನು ತಿಳಿಸಿ.<br><br>***ಉತ್ತರ :***<br><br>ಕವಿ ಸಿ.ಪಿ.ಕೆ.ಯವರು ಗ್ರಂಥಾಲಯವನ್ನು ಹೊಕ್ಕೊಡನೆಯೇ ಎತ್ತ ದೃಷ್ಟಿ ಹರಿಸಿದರೂ ಸಾಲಾಗಿ ನಿಂತಿರುವ ಪುಸ್ತಕಗಳ ಪರ್ವತವನ್ನು ಕಂಡು ಆಶ್ಚರ್ಯಚಕಿತರಾದರರು. ಆ ರಾಶಿ ರಾಶಿ ಪುಸ್ತಕಗಳ ಅಡಿಯಲ್ಲಿ ಬಂದು ನಿಂತರೆ ಧೂಳಿನ ಕಣವಾಗಿ ನಿಲ್ಲುವೆನು. ಕ್ಷಣಕಾಲ ಬಂದು ನಿಂತರೆ ನನ್ನ ಮತಿ ಮುದುಡಿ ಹೋಗಿ, ನನ್ನ ಅಹಂಕಾರ ನುಚ್ಚುನೂರಾಗಿ, ಎಷ್ಟು ವೇಗವಾಗಿ ಹೊರಗೆ ಓಡುವೆನೋ ಎಂಬ ಆತುರ ಉಂಟಾಗುತ್ತದೆ. ಏಕೆಂದರೆ ನನಗಿಲ್ಲಿ ಭಯವಾಗುತ್ತಿದೆ ಎಂದು ತಮ್ಮ ಅನುಭವವನ್ನು ತಿಳಿಸಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 28. | ಮಹಾಶಿಲ್ಪಿ ವಿಶುವಿಗೆ ಧರ್ಮಪದನು ನೀಡಿದ ಆಶ್ವಾಸನೆಯೇನು ?<br>***ಉತ್ತರ :***<br>ಮಹಾಶಿಲ್ಪಿಗಳೇ, ದೇವಾಲಯದ ಕಲಶವನ್ನು ನಾನು ನಿಲ್ಲಿಸಬಲ್ಲೆ. ಅನುಮಾನ ಬೇಡ. ಅವಕಾಶ ಕೊಟ್ಟು ನೋಡಿ, ಪ್ರಯತ್ನಕ್ಕೆ ಜಯ ಖಂಡಿತ. ನಿಮ್ಮ ನಿಟ್ಟುಸಿರು ನೀಗುವಂತೆ ಮಾಡುತ್ತೇನೆ. ದಯಮಾಡಿ ಅಲಕ್ಷಿಸಬೇಡಿ ಎಂದು ಧರ್ಮಪದನು ಮಹಾಶಿಲ್ಪಿ ವಿಶುವಿಗೆ ಆಶ್ವಾಸನೆ ನೀಡಿದನು. | |
| 29. | ಶರೀಫರ ಬಾಲ್ಯವು ಹಿಂದೂ ಪರಂಪರೆಯೊಂದಿಗೆ ಹೇಗೆ ಬೆರೆತುಹೋಗಿತ್ತು ?<br>***ಉತ್ತರ :***<br>ಶರೀಫರಿಗೆ ಬಾಲ್ಯದಲ್ಲಿಯೇ ರಾಮಾಯಣ, ಮಹಾಭಾರತಗಳೆಂದರೆ ತುಂಬಾ ಪ್ರೀತಿ. ಅಭಿನಯದಲ್ಲಿಯೂ ತುಂಬಾ ಆಸಕ್ತಿಯಿದ್ದುದರಿಂದ ರಾಮಾಯಣ, ಮಹಾಭಾರತ, ಅಲ್ಲಮ ಪ್ರಭು ಮುಂತಾದ ಬಯಲಾಟಗಳಲ್ಲಿ ಪಾತ್ರವಹಿಸಿ ಪ್ರೇಕ್ಷಕರ ಕಣ್ಮನಗಳನ್ನು ತಣಿಸುತ್ತಿದ್ದರು. ಜಾತ್ರೆ, ಉತ್ಸವ ಮೊದಲಾದವುಗಳಲ್ಲಿ ಅನುಭಾವ ಕವಿಗಳಾದ ಸರ್ವಜ್ಞ, ನಿಜಗುಣಯೋಗಿ, ಸರ್ಪಭೂಷಣ ಶಿವಯೋಗಿ ಮೊದಲಾದವರ ಕಾವ್ಯವಾಚನ ಮಾಡುತ್ತಿದ್ದರು. ಜನ್ಮ ಮುಸ್ಲಿಂ ಕುಟುಂಬದಲ್ಲಾದರೂ ಹಿಂದೂ ಪರಂಪರೆಯೊಂದಿಗೆ ಶರೀಫರ ಬಾಲ್ಯ ಬೆರೆತು ಹೋಗಿತ್ತು. | |
| 30. | ಈರಪ್ಪ ಎಂ. ಕಂಬಳಿಯವರ ಬಿಳಿಯ ಶರ್ಟು ಕೆಂಪು ಬಣ್ಣಕ್ಕೆ ತಿರುಗಿದ್ದೇಕೆ ?<br>***ಉತ್ತರ :***<br>ಈರಪ್ಪ ಎಂ. ಕಂಬಳಿಯವರು ತಾವು ಪ್ರಯಾಣಿಸುತ್ತಿದ್ದ ಬಸ್ಸಿನ ಟಾಪಿನ ಮೇಲೆ ಕುಳಿತಿದ್ದರು. ಬಸ್ಸು ನಿಂತಾಗಲೆಲ್ಲ ಹಿಂದೆ ಎದ್ದ ಧೂಳು–ದುಮ್ಮ ಮೈಮೇಲೆ ಇಳಿಯುತ್ತಿತ್ತು. ಹೀಗಾಗಿ ಇವರು ಧರಿಸಿದ್ದ ಬಿಳಿಯ ಶರ್ಟು ಧೂಳು ಬಿದ್ದು ಕೆಂಪು ಬಣ್ಣಕ್ಕೆ ತಿರುಗಿತು. | |
| V. | **ಸಂದರ್ಭಸಹಿತ ವಿವರಣೆ :** | $4 \times 3 = 12$ |
| | ಪದ್ಯದ ಹೆಸರು, ಕೃತಿ–ಕರ್ತೃ | 1 ಅಂಕ |
| | ಯಾರು–ಯಾರಿಗೆ, ಸಂದರ್ಭ ವಿವರಣೆಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 31. | "ನನ್ನ ಖೈದಿಯ ರಕ್ಷಣೆಯನ್ನು ನಾನು ಸರಿಯಾಗಿ ಮಾಡಬೇಕಷ್ಟೆ".<br>***ಉತ್ತರ :***<br>"ನನ್ನ ಖೈದಿಯ ರಕ್ಷಣೆಯನ್ನು ನಾನು ಸರಿಯಾಗಿ ಮಾಡಬೇಕಷ್ಟೆ" ಎಂಬ ಈ ವಾಕ್ಯವನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ 'ಅಮೆರಿಕಾದಲ್ಲಿ ಗೊರೂರು' | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಕೃತಿಯಿಂದ ಆರಿಸಲಾದ 'ಲಾಕಪ್ಪಿನಲ್ಲಿ ಒಂದು ರಾತ್ರಿ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ಮಿನಿಪೊಲೀಸ್ ನಗರದ ಟ್ರಾಫಿಕ್ ಪೊಲೀಸ್‌ನವನು ಗೊರೂರರ ಬಳಿ ಹೇಳಿದ ಮಾತಿದು. | |
| | ಗೊರೂರರು ಮಿನಿಪೊಲೀಸ್ ನಗರದಲ್ಲಿ ಸಂಕಷ್ಟಕ್ಕೆ ಗುರಿಯಾಗಿ, ತನ್ನ ಸಮಸ್ಯೆಯನ್ನು ಟ್ರಾಫಿಕ್ ಪೊಲೀಸ್‌ನ ಬಳಿ ಹೇಳಿದರು. ಆಗ ಆತ ಅವರನ್ನು ಕರೆದುಕೊಂಡು ತನ್ನ ಮನೆಗೆ ಹೋಗಿ ಊಟೋಪಚಾರ ನೀಡಿದನು. ಪಕ್ಕದಲ್ಲೇ ತನ್ನ ವಶದಲ್ಲಿ ಇರುವ ಲಾಕಪ್‌ನಲ್ಲಿ ಮಲಗಲು ಹೇಳಿ ಮೇಲಿನಂತೆ ಹೇಳುತ್ತಾನೆ. | |
| | ಟ್ರಾಫಿಕ್ ಪೊಲೀಸ್‌ನ ಸಹಾಯ ಮತ್ತು ಹಾಸ್ಯ ಪ್ರಜ್ಞೆ ಇಲ್ಲಿನ ಸ್ವಾರಸ್ಯವಾಗಿದೆ. | |
| 32. | "ಅಪ್ಪ ನೀ ಬಂದು ಕರುಣೀಸೊ." | |
| | ***ಉತ್ತರ :*** | |
| | "ಅಪ್ಪ ನೀ ಬಂದು ಕರುಣೀಸೊ." ಎಂಬ ಈ ವಾಕ್ಯವನ್ನು 'ಜನಪದ ಗೀತೆ'ಯಿಂದ ಆರಿಸಿಕೊಳ್ಳಲಾಗಿದೆ. | |
| | ಜನಪದರು ಮಳೆದೇವರನ್ನು ಪ್ರಾರ್ಥಿಸುತ್ತಾ ಹೇಳಿದ ಮಾತಿದು. | |
| | ರೈತರಿಗೆ ಬೇಸಾಯ ಪ್ರಧಾನ ವೃತ್ತಿ. ಮಳೆ ಬರದೆ ಬೆಳೆ ಬರುವುದಿಲ್ಲ. ಜನಪದರು ಮಳೆಗಾಗಿ ದೇವರಲ್ಲಿ ಪ್ರಾರ್ಥಿಸುತ್ತಾ ರಕ್ಷಿಸುವವರಿಲ್ಲದೆ ಈ ಭೂಮಿ ಬರಡಾಗಿದೆ. ನೀರಿಲ್ಲದ ದನಕರುಗಳು ಸೊರಗಿವೆ. ಮಳೆ ದೇವರೇ ನೀ ಬಂದು ಕರುಣಿಸು ಎಂದು ಪ್ರಾರ್ಥಿಸಿದ್ದಾರೆ. | |
| | ಮಳೆದೇವರಲ್ಲಿ ಜನಪದರ ಪ್ರಾರ್ಥನೆಯು ನೀರಿನ ಅವಶ್ಯಕತೆ ಹಾಗೂ ರೈತರ ಅಸಹಾಯಕತೆಯನ್ನು ಸ್ವಾರಸ್ಯಪೂರ್ಣವಾಗಿ ವ್ಯಕ್ತಪಡಿಸಿದೆ. | |
| 33. | "ಭಾಳ ಭೇಷ್ ಅದರೀ ಪುಸ್ತಕ. ನೀವೂ ಓದಬೇಕು ಇದನ್ನೊಮ್ಮೆ." | |
| | ***ಉತ್ತರ :*** | |
| | "ಭಾಳ ಭೇಷ್ ಅದರೀ ಪುಸ್ತಕ. ನೀವೂ ಓದಬೇಕು ಇದನ್ನೊಮ್ಮೆ." ಎಂಬ ಈ ವಾಕ್ಯವನ್ನು ಬೀಚಿಯವರ ಆತ್ಮಚರಿತ್ರೆ 'ನನ್ನ ಭಯಾಗ್ರಫಿ'ಯಿಂದ ಆರಿಸಲಾದ 'ನನ್ನ ಪುಸ್ತಕ ಪ್ರಪಂಚ' ಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ಬೀಚಿಯವರ ಪತ್ನಿ ಪುಸ್ತಕ ಓದುತ್ತಾ ಬೀಚಿಯವರಿಗೆ ಹೇಳಿದ ಮಾತಿದು. | |
| | ಬೀಚಿಯವರ ಪತ್ನಿ ಸಮಯ ಕಳೆಯಲೆಂದು ಒಂದು ಪುಸ್ತಕವನ್ನು ತಂದುಕೊಡುವಂತೆ ಹೇಳುತ್ತಾರೆ. ಬೀಚಿಯವರು ಸಾಹಿತ್ಯ ಭಂಡಾರದಿಂದ ಬರುವಾಗ ಒಂದು ಪುಸ್ತಕವನ್ನು ತಂದುಕೊಡುತ್ತಾರೆ. ಮರುದಿನ ಬೀಚಿಯವರ ಪತ್ನಿ ಪುಸ್ತಕ ಓದುತ್ತಾ ಅಳುತ್ತಿರುವುದನ್ನು ಗಮನಿಸಿ ತಮಾಷೆ ಮಾಡುತ್ತಾರೆ. ಆಗ ಬೀಚಿಯವರ ಪತ್ನಿ ಹೀಗೆ ಹೇಳುತ್ತಾರೆ. | |
| | ಪುಸ್ತಕದ ಕುರಿತಾದ ಸದಭಿಪ್ರಾಯ, ಬೇರೆಯವರೂ ಓದಬೇಕೆಂಬ ಅಭಿಲಾಷೆ ಇಲ್ಲಿ ಸ್ವಾರಸ್ಯಕರವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 34. | "ರಕ್ತಗಾಲಿನ ನಮ್ಮ ಪಾಲಿನ ಹಾಡ ಬರೆಯತೇವ"<br>***ಉತ್ತರ :***<br>"ರಕ್ತಗಾಲಿನ ನಮ್ಮ ಪಾಲಿನ ಹಾಡ ಬರೆಯತೇವ" ಎಂಬ ಈ ವಾಕ್ಯವನ್ನು ಸತೀಶ ಕುಲಕರ್ಣಿಯವರು ಬರೆದ 'ಕಟ್ಟತೇವ ನಾವು' ಪದ್ಯದಿಂದ ಆರಿಸಿಕೊಳ್ಳಲಾಗಿದೆ.<br>ಕ್ರಾಂತಿಕಾರರ ಕುರಿತಾಗಿ ಕವಿ ಹೀಗೆ ಹೇಳಿದ್ದಾರೆ.<br>ಸಮಾಜದಲ್ಲಿರುವ ಅಸಮಾನತೆ, ತಾರತಮ್ಯಗಳನ್ನು ಹೋಗಲಾಡಿಸಲು ಕ್ರಾಂತಿಯಿಂದ ಮಾತ್ರ ಸಾಧ್ಯ. ಆದರೆ ಕ್ರಾಂತಿ ಎಂದರೆ ಕೆಂಡದ ಕುಂಡವನ್ನು ತಲೆಯ ಮೇಲೆ ಹೊತ್ತು ಮುಳ್ಳಿನ ಮೇಲೆ ನಡೆದ ಹಾಗೆ ಅನೇಕ ಅಡೆತಡೆಗಳು ಎದುರಾಗುತ್ತವೆ. ಅವುಗಳನ್ನು ಎದುರಿಸಿ ಗುರಿ ತಲುಪುತ್ತೇವೆ ಎಂಬ ಆತ್ಮವಿಶ್ವಾಸದ ನುಡಿ ಇದಾಗಿದೆ.<br>ಏನೇ ಅಡೆತಡೆಗಳು ಎದುರಾದರೂ ಆತ್ಮವಿಶ್ವಾಸದಿಂದ ಸಾಧಿಸಿದಾಗ ಗುರಿ ತಲುಪಲು ಸಾಧ್ಯ ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ. | |
| VI. | **ಐದು–ಆರು ವಾಕ್ಯಗಳಲ್ಲಿ ಉತ್ತರಿಸುವುದು :** | 4 × 3 = 12 |
| | ವಿಷಯಕ್ಕೆ | 2 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 35. | ಕೊಡಗಿನ ಗೌರಮ್ಮನವರ ಸಾಹಿತ್ಯ ಸೃಷ್ಟಿಗೆ ಪೂರಕವಾದ ವಿಚಾರಗಳನ್ನು ಕುರಿತು ಬರೆಯಿರಿ.<br>***ಉತ್ತರ :***<br>ಗೌರಮ್ಮನವರು ತಮ್ಮ ಪತಿ ಬಿ.ಟಿ. ಗೋಪಾಲಕೃಷ್ಣಯ್ಯನವರ ಮಾಲಿಕರಾದ ಮಂಜುನಾಥಯ್ಯನವರ ಮನೆಗೆ ಆಗಾಗ್ಗೆ ಬರುತ್ತಿದ್ದ ಹೆಸರಾಂತ ಲೇಖಕರ ಒಡನಾಟ ಹಾಗೂ ಪ್ರಸಿದ್ಧ ಸಾಮಾಜಿಕ ಕಾರ್ಯಕರ್ತೆ ಮತ್ತು ಲೇಖಕಿಯಾಗಿದ್ದ ಆರ್. ಕಲ್ಯಾಣಮ್ಮ ಅವರೊಡನೆ ಸಂಪರ್ಕವನ್ನು ಇಟ್ಟುಕೊಂಡಿದ್ದರು. ಹೀಗಾಗಿ ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯದ ಚರ್ಚೆ, ಬದಲಾವಣೆಗಳು ಮತ್ತು ಹೊಸ ಬರವಣಿಗೆಯ ಸಂಪರ್ಕ ಈ ಲೇಖಕಿಯ ಬರವಣಿಗೆಗೆ ಪೂರಕವಾಗಿದ್ದವು. ಯಕ್ಷಗಾನ, ತಾಳಮದ್ದಲೆ, ಕುಮಾರವ್ಯಾಸ, ಉಮರ್ ಖಯಾಮ್ ಕಾವ್ಯ ಮತ್ತು ಜಾನಪದದ ಬಗ್ಗೆ ಆಸಕ್ತಿಯನ್ನು ಬೆಳೆಸಿಕೊಂಡಿದ್ದರು. ಅಲ್ಲದೆ ಸುತ್ತಮುತ್ತಲಿನ ಬದುಕಿನಲ್ಲಿ ಕಂಡುಕೇಳಿದ ಘಟನೆಗಳು ಮತ್ತು ಅವುಗಳ ಅನುಭವದ ಹಿನ್ನೆಲೆಯಲ್ಲಿ ಮಹಿಳಾಲೋಕದ ಕನಸುಗಳ ಆದರ್ಶಗಳ ಚಿತ್ರಣವು ಇವರ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಬರವಣಿಗೆಗಳಿಗೆ ಪ್ರೇರಣೆಯಾಗಿತ್ತು. ಭಾರತೀಯ ಸಮಾಜದಲ್ಲಿ ಮಹಿಳೆಯರು ತಮ್ಮದೇ ಆದ ಸಂಕೋಲೆಗಳು ಮತ್ತು ನಿಸ್ಸಹಾಯಕತೆಯ ಇಕ್ಕಟ್ಟಿನಲ್ಲಿ ನರಳುತ್ತಿರುವ ರೀತಿಯನ್ನು ಗ್ರಹಿಸಿ ಸಮಾಜದಲ್ಲಿನ ಕ್ರೌರ್ಯದ ನಾನಾ ಮುಖಗಳನ್ನು ಬರವಣಿಗೆಯಲ್ಲಿ ಅನಾವರಣಗೊಳಿಸಿದರು. ಇವೆಲ್ಲವೂ ಕೊಡಗಿನ ಗೌರಮ್ಮನವರ ಸಾಹಿತ್ಯ ಸೃಷ್ಟಿಗೆ ಪೂರಕವಾದ ವಿಚಾರಗಳಾಗಿವೆ. | |
| 36. | ಬೀಚಿಯವರು 'ಯಕ್ಷಪ್ರಶ್ನೆ' ಕೃತಿಯನ್ನು ದಯವಿಟ್ಟು ಓದಿ ಎಂದು ಏಕೆ ಹೇಳಿದ್ದಾರೆ ? | |
| | ***ಉತ್ತರ :*** | |
| | ಬೀಚಿಯವರ ಮನಸ್ಸನ್ನು ವಶಪಡಿಸಿಕೊಂಡ ಪುಸ್ತಕ ಶ್ರೀಯುತ ಶಂ.ಬಾ. ಜೋಷಿಯವರ 'ಯಕ್ಷ ಪ್ರಶ್ನೆ'. ಹಳೆಯ ಪೌರಾಣಿಕ ಕಥೆಯನ್ನು ಹೊಸ ಕಣ್ಣಿನಿಂದ ನೋಡುವ ಅವರ ಸಂಶೋಧನಾ ಪದ್ಧತಿ ಕನ್ನಡಿಗರಲ್ಲಿ ಅಸದೃಶ. ಹೊರನೋಟಕ್ಕೆ ಕೇವಲ ಗೊಡ್ಡು ಕಥೆಗಳಾಗಿ ಕಾಣುವ ನಮ್ಮ ಧರ್ಮ ಗ್ರಂಥಗಳಲ್ಲಿ ಬರುವ ಕಥೆ, ಉಪಕಥೆಗಳಿಗೆ ಜೋಷಿಯವರು ಕೊಡುವ ಅರ್ಥ ಕನ್ನಡಕ್ಕೆ ಹೊಸದು. ಅಂದಿನ ಯಕ್ಷಪ್ರಶ್ನೆಯ ಕಥೆ ನಮಗಿಂದು ಬರಲಿರುವ ಸಮಾಜದ ದರ್ಶನವನ್ನು ಮಾಡಿಸುತ್ತದೆ. ಹೀಗಾಗಿ 'ದಯವಿಟ್ಟು ಇದನ್ನು ಓದಿ' ಎಂದು ಬೀಚಿಯವರು ಹೇಳಿದ್ದಾರೆ. | |
| 37. | ಗ್ರಂಥಾಲಯದ ಬಗ್ಗೆ ಕವಿ ಸಿ.ಪಿ.ಕೆ.ಯವರು ವ್ಯಕ್ತಪಡಿಸಿರುವ ಭಾವನೆಗಳನ್ನು ಕುರಿತು ಬರೆಯಿರಿ. | |
| | ***ಉತ್ತರ :*** | |
| | ಕವಿ ಸಿ.ಪಿ.ಕೆ.ಯವರು ಗ್ರಂಥಾಲಯವನ್ನು ಕುರಿತು ಹೀಗೆ ಹೇಳಿದ್ದಾರೆ. ಗ್ರಂಥಾಲಯವನ್ನು ಹೊಕ್ಕಾಗ ಎತ್ತ ದೃಷ್ಟಿಹರಿಸಿದರೂ ಸಾಲಾಗಿ ನಿಂತಿರುವ ಪುಸ್ತಕಗಳ ಪರ್ವತವನ್ನು ಕಂಡು ಆಶ್ಚರ್ಯವಾಗುತ್ತಿದೆ. ಆ ರಾಶಿ ರಾಶಿ ಪುಸ್ತಕಗಳ ಅಡಿಯಲ್ಲಿ ಬಂದು ನಿಂತರೆ ಧೂಳಿನ ಕಣವಾಗಿ ತೋರುತ್ತೇನೆ. ಕ್ಷಣಕಾಲ ನಿಂತರೆ ನನ್ನ ಮತಿ ಮುದುಡಿ ಹೋಗಿ, ನನ್ನ ಅಹಂಕಾರ ನುಚ್ಚು ನೂರಾಗುತ್ತದೆ. ಹೇಗೆ ಒಳಗೆ ಬಂದೆನೋ ಅಷ್ಟೇ ವೇಗವಾಗಿ ಹೊರಗೆ ಓಡಬೇಕೆಂಬ ಆತುರ ಉಂಟಾಗುತ್ತದೆ. ಏಕೆಂದರೆ ಇಲ್ಲಿ ಬಂದಾಗ ಭಯವಾಗುತ್ತದೆ. ಎಂದಿದ್ದಾರೆ. ಅಲ್ಲದೆ ಇಲ್ಲಿರುವ ಪುಸ್ತಕಗಳು ಹಿರಿಯರ ಬದುಕಿನ ಪಳೆಯುಳಿಕೆಗಳು. ಈ ಗ್ರಂಥಗಳೊಂದಿಗೆ ಮೂಲವನ್ನು ಕಲ್ಪಿಸಿಕೊಂಡರೆ, ಕೃಷ್ಣನ ವಿಶ್ವರೂಪವನ್ನು ಕಂಡು ಪಾರ್ಥನು ಭೀತವಿಸ್ಮಿತನಾದಂತೆ ನಾನೂ ಆದೇನು ಎಂದು ಗ್ರಂಥಾಲಯದ ಬಗ್ಗೆ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 38. | ಬಸವಣ್ಣನವರ ವಚನಗಳಲ್ಲಿ ನೀವು ಮೆಚ್ಚಬಹುದಾದ ಮಾನವೀಯ ಮೌಲ್ಯಗಳಾವುವು ?<br>***ಉತ್ತರ :***<br>ಬಸವಣ್ಣನವರ ವಚನಗಳಲ್ಲಿರುವ ಮಾನವೀಯ ಮೌಲ್ಯಗಳೆಲ್ಲವೂ ಮೆಚ್ಚುವಂತಹದ್ದೇ ಆಗಿದೆ. ಕಳ್ಳತನ ಮಾಡಬಾರದು, ಕೊಲೆ ಮಾಡಬಾರದು, ಸುಳ್ಳನ್ನು ಹೇಳಬಾರದು, ಕೋಪಿಸಿಕೊಳ್ಳಬಾರದು, ಅಸಹ್ಯಪಡಬಾರದು, ತನ್ನನ್ನು ತಾನು ಬಣ್ಣಿಸಬಾರದು, ಇನ್ನೊಬ್ಬರನ್ನು ನಿಂದಿಸಬಾರದು. ಈ ಮೂಲಕ ಅಂತರಂಗ ಮತ್ತು ಬಹಿರಂಗ ಶುದ್ಧಿಯಾಗಿಟ್ಟುಕೊಳ್ಳಬೇಕು. ಅಲ್ಲದೆ ಸತ್ಯವನ್ನು ನುಡಿಯಬೇಕು. ಸುಳ್ಳನ್ನು ಆಡಬಾರದು. ಸ್ವರ್ಗ–ನರಕಗಳೆಲ್ಲೂ ಬೇರೆ ಇಲ್ಲ. ಆಚಾರವೇ ಸ್ವರ್ಗ, ಅನಾಚಾರವೇ ನರಕ ಎನ್ನುವ ಮೂಲಕ ಉತ್ತಮ ಆಚಾರ–ವಿಚಾರ, ನಡೆ–ನುಡಿಗಳನ್ನು ಹೊಂದಿರಬೇಕು ಎಂದಿದ್ದಾರೆ. ಈ ಮಾನವೀಯ ಮೌಲ್ಯಗಳು ಮನುಷ್ಯನನ್ನು ಸನ್ಮಾರ್ಗದಲ್ಲಿ ನಡೆಯುವಂತೆ ಮಾಡುತ್ತದೆ. | |
| VII. | **ಕವಿಗಳ / ಸಾಹಿತಿಗಳ ಕಾಲ, ಜನ್ಮಸ್ಥಳ, ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | $2 \times 3 = 6$ |
| | ಜನ್ಮಸ್ಥಳ, ಕಾಲಕ್ಕೆ | 1 ಅಂಕ |
| | ಕೃತಿಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 39. | ಆರ್.ಎಸ್. ಸುಂಕದ<br>***ಉತ್ತರ :***<br>ಇವರ ಪೂರ್ಣ ಹೆಸರು ರಾಧಾಕೃಷ್ಣ ಶ್ರೀಪಾದರಾವ್ ಸುಂಕದ. ಇವರು ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನ ಮೊರಬದಲ್ಲಿ ೧೯೫೧ ರಲ್ಲಿ ಜನಿಸಿದರು. 'ಕನ್ನಡ ವ್ಯಾಕರಣ', 'ಗಂಗಾಧರ ಮಡಿವಾಳೇಶ್ವರ ತುರಮರಿ ಒಂದು ಅಧ್ಯಯನ', 'ಮೊರಬ ಗ್ರಾಮದ ಸಾಂಸ್ಕೃತಿಕ ಅಧ್ಯಯನ', 'ಶ್ರೀ ಶಿಶುನಾಳ ಶರೀಫ ಸಾಹೇಬರ ಅನುಭಾವ ಗೀತ ಮಂಜರಿ' ಕೃತಿಗಳನ್ನು ಬರೆದಿದ್ದಾರೆ. | |
| 40. | ಸತೀಶ ಕುಲಕರ್ಣಿ<br>***ಉತ್ತರ :***<br>ಸತೀಶ ಕುಲಕರ್ಣಿಯವರು ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಗುಡಗೇರಿಯಲ್ಲಿ ೧೩ ಜುಲೈ ೧೯೫೧ ರಲ್ಲಿ ಜನಿಸಿದರು. 'ಬೆಂಕಿ ಬೇರು', 'ನೆಲದ ನೆರಳು', 'ವಿಕ್ಷಿಪ್ತ', 'ಒಡಲಾಳ ಕಿಚ್ಚು', 'ವಿಷಾದಯೋಗ', 'ಗಾಂಧೀಗಿಡ', 'ಕಂಪನಿ ಸವಾಲ್', 'ಭಿನ್ನ', 'ಸಮುದ್ರ ಸೂರ್ಯ', 'ಗುರುವರ್ಯ ಗೋಕಾಕರು' ಎಂಬ ಮುಂತಾದ ಕೃತಿಗಳನ್ನು ಬರೆದಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| VIII. | **ಗಾದೆಯ ಮಾತನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 3 = 3 |
| 41. | ಹಾಸಿಗೆ ಇದ್ದಷ್ಟು ಕಾಲು ಚಾಚು. | |
| | ***ಅಥವಾ*** | |
| | ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ. | |
| | ಗಾದೆಯ ಮಹತ್ವ | 1 ಅಂಕ |
| | ಗಾದೆಯ ಅರ್ಥ / ವಿವರಣೆ | 1 ಅಂಕ |
| | ಭಾಷಾಶೈಲಿಗೆ / ಉದಾಹರಣೆಗೆ | 1 ಅಂಕ |
| | ಒಟ್ಟು | 3 ಅಂಕಗಳು |
| IX. | **ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | 1 × 4 = 4 |
| | ವಿಷಯಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 42. | ರಾಮಸಿಂಗ್ ಕುಟುಂಬದವರ ದೇಶಪ್ರೇಮ ಮತ್ತು ತ್ಯಾಗವನ್ನು ಕುರಿತು ಬರೆಯಿರಿ.<br>***ಅಥವಾ***<br>ಸೋಮಣ್ಣನು ಕುಲಕರ್ಣಿಯ ಕೃತ್ಯವನ್ನು ಹೇಗೆ ಖಂಡಿಸಿದನು ? ವಿವರಿಸಿರಿ.<br>***ಉತ್ತರ :***<br>ರಾಮಸಿಂಗ್ ಕುಟುಂಬದವರ ದೇಶಪ್ರೇಮ ಮತ್ತು ತ್ಯಾಗ ಅಪೂರ್ವವಾದುದು. ರಾಮಸಿಂಗ್‌ನ ತಂದೆಯೂ ಸ್ವಾತಂತ್ರ್ಯ ಹೋರಾಟದಲ್ಲಿ ತನ್ನ ಪ್ರಾಣ ತ್ಯಾಗ ಮಾಡಿದ್ದರು. ಆದರೂ ರಾಮಸಿಂಗ್ ಮೋಹನಪುರದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ಮುಂದಾಗುತ್ತಾನೆ. ರಾಮಸಿಂಗ್‌ನ ತಾಯಿ ತುಳಜಾಬಾಯಿ ಪತಿಯನ್ನು ಕಳೆದುಕೊಂಡಿದ್ದರೂ ತನ್ನ ಮಗನನ್ನು ಆಶೀರ್ವದಿಸಿ ಚಳುವಳಿಗೆ ಕಳುಹಿಸಿಕೊಡುತ್ತಾಳೆ. ಬ್ರಿಟಿಷರ ಗುಂಡೇಟಿಗೆ ರಾಮಸಿಂಗ್ ಬಲಿಯಾಗುತ್ತಾನೆ. ಸುದ್ದಿ ತಿಳಿದ ತುಳಜಾಬಾಯಿ ಕಣ್ಣೀರು ಸುರಿಸುತ್ತಾ ಮಗನ ಬಳಿಗೆ ಓಡಿ ಬರುತ್ತಾಳೆ. ತನ್ನ ಮಗನನ್ನೂ ಕಳೆದುಕೊಂಡು ತ್ಯಾಗಮಯಿಯಾಗುತ್ತಾಳೆ. ಪತಿ ಮತ್ತು ಮಗನನ್ನು ಕಳೆದುಕೊಂಡರೂ ಧೈರ್ಯಗುಂದದೆ ತುಳಜಾಬಾಯಿ ತಾನು ಹಿಡಿದು ತಂದಿರುವ ಧ್ವಜವನ್ನು ಎತ್ತಿ ಹಿಡಿದು ಬ್ರಿಟಿಷರ ವಿರುದ್ಧ ಪ್ರತಿಭಟಿಸುತ್ತಾಳೆ. ಇವರ ಕುಟುಂಬದ ದೇಶಪ್ರೇಮ ಮತ್ತು ತ್ಯಾಗ ಸ್ಫೂರ್ತಿಯುತವಾಗಿದೆ.<br>***ಅಥವಾ*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಸೋಮಣ್ಣನು ಕುಲಕರ್ಣಿಯ ಕೃತ್ಯವನ್ನು ಖಂಡಿಸಿದ ಬಗೆ :<br>ಮೋಹನಪುರದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದ ರಾಮಸಿಂಗ್‌ನನ್ನು ಬ್ರಿಟಿಷ್ ಅಧಿಕಾರಿ ಕುಲಕರ್ಣಿಯು ಗುಂಡಿಟ್ಟು ಸಾಯಿಸುತ್ತಾನೆ. ಅದೇ ಸಮಯದಲ್ಲಿ ಅಲ್ಲಿಗೆ ಬಂದ ಸೋಮಣ್ಣನು ಕುಲಕರ್ಣಿಯ ಕೃತ್ಯವನ್ನು ಕಟುವಾಗಿ ಖಂಡಿಸುತ್ತಾನೆ. ಬಾಲಕನ ಮೇಲೆ ಗುಂಡು ಹಾರಿಸಿರುವಿರಾ ? ಈ ಹೀನಕಾರ್ಯಕ್ಕೆ ನಿಮ್ಮ ಕೈಗಳಾದರೂ ಹೇಗೆ ಮೇಲೆತ್ತಿದವು ? ಕೊಟ್ಟ ಕೂಳಿಗಾಗಿ ಸರಕಾರದ ಹಟವನ್ನು ನೀವು ನಡೆಸಿಕೊಡುವಾಗ, ಭಾರತ ಮಾತೆಯ ಬಂಧ ವಿಮೋಚನೆಗೆ ನಿಂತ ಇವರನ್ನು ಹಿಡಿದು ಜೈಲಿಗೆ ಹಾಕಬಹುದಿತ್ತು. ಅದನ್ನು ಬಿಟ್ಟು ಗುಂಡಿಟ್ಟು ಅವನನ್ನು ಕೊಂದದ್ದು ನಿಮ್ಮ ಪರಾಕ್ರಮವಲ್ಲವೇ ? ಭಾರತ ಮಾತೆಯ ಸ್ವಾತಂತ್ರ್ಯಕ್ಕಾಗಿ ಹಗಲಿರುಳು ಹಂಬಲಿಸುವ ನಮಗೆ ಪಾರತಂತ್ರ್ಯದ ಕೆಸರಿನಲ್ಲಿಯೇ ಕೊಳೆಯುತ್ತಲಿರಿ ಎಂದು ಆಜ್ಞೆ ಮಾಡಿದರೆ ಅದು ಹಿತಕರವಲ್ಲ. ನಾವು ಸ್ವಾತಂತ್ರ್ಯಕ್ಕಾಗಿ ಹೋರಾಡಿ ಸತ್ತರೆ ನಮ್ಮ ಮುಂದಿನ ಪೀಳಿಗೆಯವರು ಅದರ ಫಲವನ್ನು ಸವಿಯುತ್ತಾರೆ. ಆದರೆ ಬ್ರಿಟಿಷ್ ಸರಕಾರದ ಗುಲಾಮರಾಗಿ, ಗೇಣು ಹೊಟ್ಟೆಗಾಗಿ ದೇಶದ ಕಂದಮ್ಮರನ್ನು ಕೊಂದು ಅವರ ರಕ್ತದ ಮಡುವಿನಲ್ಲಿ ಮೆರೆಯುವುದು ಕರ್ತವ್ಯನಿಷ್ಠೆಯೇ ? ಧಿಕ್ಕಾರವಿರಲಿ ನಿಮ್ಮ ಬದುಕಿಗೆ, ಶತ ಧಿಕ್ಕಾರ ಎಂದು ಸೋಮಣ್ಣನು ಕುಲಕರ್ಣಿಯ ಕೃತ್ಯವನ್ನು ಖಂಡಿಸುತ್ತಾನೆ. | |
| X. | **ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)** | 1 × 4 = 4 |
| 43. | ಕಂಚುಗಾರನ ..................................................<br>..................................................<br>..................................................<br>.................................. ಪೂಜೆ ಮಾಡುವುದು ॥<br>**ಅಥವಾ**<br>ನಾನು ಎಂಬುದ ..................................................<br>..................................................<br>..................................................<br>.................................. ಕಾರ್ಯಗಳೆಲ್ಲವು ॥<br>***ಉತ್ತರ :***<br>ಕಂಚುಗಾರನ ಬಿಡಾರದಂದದಿ<br>ಕಂಚು ಹಿತ್ತಾಳೆಯ ಪ್ರತಿಮೆಗಳ ನೆರಹಿ<br>ಮಿಂಚಬೇಕೆಂದು ಬಲು ಜ್ಯೋತಿಗಳನು ಹಚ್ಚಿ<br>ವಂಚನೆಯಿಂದಲಿ ಪೂಜೆ ಮಾಡುವುದು ॥<br>**ಅಥವಾ** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ನಾನು ಎಂಬುದ ಬಿಟ್ಟು ಜ್ಞಾನಿಗಳೊಡನಾಡಿ<br>ಏನಾದರೂ ಹರಿ ಪ್ರೇರಣೆಯೆಂದು<br>ಧ್ಯಾನಿಸಿ ಮೌನದಿ ಪುರಂದರ ವಿಠಲನ<br>ಕಾಣದೆ ಮಾಡಿದ ಕಾರ್ಯಗಳೆಲ್ಲವು ॥ | |
| XI. | **ಪದ್ಯಭಾಗದ ಸಾರಾಂಶ ಬರೆಯುವುದು :** | 1 × 4 = 4 |
| | ವಿವರಣೆಗೆ | 3 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 44. | ಸ್ವಸ್ವಭಾವ ಚಹರೆ ಬೇರೆ<br>ತಾಯ ಬಸಿರು ಒಂದೆ<br>ಕಳಸ ಶಿಲುಬೆ ಬಿಳಿಮಿನಾರು<br>ಧರ್ಮದುಸಿರು ಒಂದೆ ॥<br>***ಉತ್ತರ :***<br>ಕವಿ ಕೆ.ಎಸ್. ನಿಸಾರ್ ಅಹಮದ್ ಅವರು 'ಭೂಮಿತಾಯ ಕುಡಿಗಳು' ಪದ್ಯದಲ್ಲಿ ಮಾನವರಾದ ನಾವೆಲ್ಲರೂ ಒಂದೇ. ಭೂಮಿತಾಯಿಯ ಮಕ್ಕಳಾದ ನಾವೆಲ್ಲರೂ ಒಗ್ಗಟ್ಟಾಗಿರಬೇಕು ಎಂಬ ಆಶಯವನ್ನು ವ್ಯಕ್ತಪಡಿಸುತ್ತಾ ಅನೇಕ ನಿದರ್ಶನಗಳನ್ನು ನೀಡಿದ್ದಾರೆ. ಮಾನವ ತನ್ನ ಸ್ವಭಾವ, ಲಕ್ಷಣ, ಬಣ್ಣ ಮೊದಲಾದವುಗಳಿಂದ ಬೇರೆ ಬೇರೆಯಾಗಿ ಕಾಣಿಸಿದರೂ, ಆತ ಭೂಮಿತಾಯಿಯ ಒಡಲಿನಲ್ಲೇ ಜನಿಸಿ ಬದುಕುತ್ತಿದ್ದಾನೆ. ಕಳಸ, ಶಿಲುಬೆ, ಬಿಳಿ ಮಿನಾರು, ಹಿಂದೂ, ಕ್ರೈಸ್ತ, ಮುಸ್ಲಿಂ ಧರ್ಮದ ಸಂಕೇತಗಳಾಗಿದ್ದರೂ ಎಲ್ಲಾ ಧರ್ಮದ ಉಸಿರೂ ಒಂದೇ ಆಗಿದೆ. ಹೀಗಾಗಿ ಮನುಷ್ಯನಾದವನು ಯಾವುದೇ ಭಿನ್ನತೆ ಇದ್ದರೂ ಭೂಮಿತಾಯಿಯ ಮಕ್ಕಳೆಂದು ತಿಳಿದು ಏಕತಾಭಾವನೆಯನ್ನು ಹೊಂದಬೇಕು ಎಂದಿದ್ದಾರೆ. | |
| XII. | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :**<br>(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ)<br>ವ್ಯಕ್ತಿಗೆ ತನ್ನ ಬದುಕಿನಲ್ಲಿ ನೆಮ್ಮದಿ, ಸಂತಸ, ತೃಪ್ತಿಯನ್ನು ಒದಗಿಸುವ ಮನೋರಂಜನೆಯ ಮಾಧ್ಯಮವೇ ಕಲೆ. ದೇಶ, ಕಾಲವನ್ನು ಮೀರಿದ ಜನಪ್ರಿಯತೆ ಕಲೆಗಿದೆ. ಜನಸಾಮಾನ್ಯರ ಆಚಾರ–ವಿಚಾರ, ರೀತಿ–ನೀತಿ, ನಂಬಿಕೆ–ಸಂಪ್ರದಾಯಗಳ ಅಭಿವ್ಯಕ್ತಿಯೇ ಜನಪದ ಕಲೆ. ವ್ಯಕ್ತಿಯ ಪ್ರತಿದಿನದ ದುಡಿಮೆಯ ಆಯಾಸ, ಆಸರಿಕೆ, ಬೇಸರಿಕೆಗಳನ್ನು ಜನಪದ | 5 × 1 = 5 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಕಲೆಗಳು ನಿವಾರಿಸುತ್ತವೆ. ಜನಪದ ಕಲೆಗಳಲ್ಲಿ ಹಲವಾರು ಪ್ರಕಾರಗಳಿವೆ. ಅವುಗಳಲ್ಲಿ ಕರಾವಳಿ ಪ್ರದೇಶದ ಪ್ರಸಿದ್ಧ ಕಲೆಯಾದ 'ಯಕ್ಷಗಾನ'ವೂ ಒಂದು. ಯಕ್ಷಗಾನವು ನೃತ್ಯ ಪ್ರಧಾನ ಕಲೆಯಾಗಿದ್ದು, ಶಾಸ್ತ್ರೀಯ ಚೌಕಟ್ಟಿಗೆ ಒಳಪಟ್ಟಿದೆ. ಹಾಡು, ಕುಣಿತ, ವೇಷಭೂಷಣ, ಮಾತು, ವಾದ್ಯ ಇವು ಯಕ್ಷಗಾನದ ಪಂಚ ಅಂಗಗಳು. ಯಕ್ಷಗಾನದಲ್ಲಿ ತೆಂಕುತಿಟ್ಟು, ಬಡಗುತಿಟ್ಟು, ಬಡಬಡಗುತಿಟ್ಟು ಎಂಬ ಮೂರು ಪ್ರಕಾರಗಳಿವೆ. | |
| 45. | ಎ) ವ್ಯಕ್ತಿಯ ಮನೋರಂಜನೆಯ ಮಾಧ್ಯಮ ಯಾವುದು ?<br>***ಉತ್ತರ :*** ವ್ಯಕ್ತಿಯ ಮನೋರಂಜನೆಯ ಮಾಧ್ಯಮ ಕಲೆ.<br>ಬಿ) ಯಾವುದನ್ನು ಮೀರಿದ ಜನಪ್ರಿಯತೆ ಕಲೆಗಿದೆ ?<br>***ಉತ್ತರ :*** ದೇಶ, ಕಾಲವನ್ನು ಮೀರಿದ ಜನಪ್ರಿಯತೆ ಕಲೆಗಿದೆ.<br>ಸಿ) ಯಕ್ಷಗಾನವು ಯಾವ ಪ್ರದೇಶದ ಪ್ರಸಿದ್ಧ ಜನಪದ ಕಲೆಯಾಗಿದೆ ?<br>***ಉತ್ತರ :*** ಯಕ್ಷಗಾನವು ಕರಾವಳಿ ಪ್ರದೇಶದ ಪ್ರಸಿದ್ಧ ಜನಪದ ಕಲೆಯಾಗಿದೆ.<br>ಡಿ) ಯಕ್ಷಗಾನದ ಮೂರು ಪ್ರಕಾರಗಳನ್ನು ಹೆಸರಿಸಿ.<br>***ಉತ್ತರ :*** ಯಕ್ಷಗಾನದಲ್ಲಿ ತೆಂಕುತಿಟ್ಟು, ಬಡಗುತಿಟ್ಟು, ಬಡಬಡಗುತಿಟ್ಟು ಎಂಬ ಮೂರು ಪ್ರಕಾರಗಳಿವೆ.<br>ಇ) ಯಕ್ಷಗಾನದ ಪಂಚ ಅಂಗಗಳು ಯಾವುವು ?<br>***ಉತ್ತರ :*** ಹಾಡು, ಕುಣಿತ, ವೇಷಭೂಷಣ, ಮಾತು, ವಾದ್ಯ ಇವು ಯಕ್ಷಗಾನದ ಪಂಚ ಅಂಗಗಳು. | |
| XIII. | **ಪ್ರಬಂಧ ಬರೆವಣಿಗೆ :** | 1 × 5 = 5 |
| 46. | ರಾಷ್ಟ್ರೀಯ ಹಬ್ಬಗಳ ಮಹತ್ವ.<br>***ಅಥವಾ***<br>ಪ್ಲಾಸ್ಟಿಕ್ ವಸ್ತುಗಳ ಬಳಕೆಯ ದುಷ್ಪರಿಣಾಮಗಳು. | |
| | ಪೀಠಿಕೆ / ಪ್ರಸಾವನೆ | 1 ಅಂಕ |
| | ವಿಷಯ ಜೋಡಣೆ | 2 ಅಂಕಗಳು |
| | ಮುಕ್ತಾಯ / ಉಪಸಂಹಾರ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| XIV. | **ಪತ್ರ ಲೇಖನ ಬರೆಯುವುದು :** | 1 × 5 = 5 |
| 47. | ನಿಮ್ಮನ್ನು ಕನಕಪುರದ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ 'ಅಕ್ಷಯ' ಎಂದು ಭಾವಿಸಿಕೊಂಡು, ನಿಮ್ಮ ಊರಿನ ಹಾಳಾದ ರಸ್ತೆಯನ್ನು ಸರಿಪಡಿಸುವಂತೆ ಕೋರಿ, ತಾಲೂಕು ಪಂಚಾಯಿತಿ ಅಧ್ಯಕ್ಷರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ. | |
| | ***ಅಥವಾ*** | |
| | ನಿಮ್ಮನ್ನು ಯಾದಗಿರಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ 'ಆದಿತ್ಯ' ಎಂದು ಭಾವಿಸಿಕೊಂಡು, ನಿಮ್ಮ ವಿದ್ಯಾಭ್ಯಾಸದ ಪ್ರಗತಿಯ ಕುರಿತು ಸಾಗರದಲ್ಲಿ ವಾಸವಿರುವ ನಿಮ್ಮ ತಂದೆ 'ರವಿಕುಮಾರ' ಎಂಬುವವರಿಗೆ ಒಂದು ಪತ್ರವನ್ನು ಬರೆಯಿರಿ. | |
| | *ವ್ಯಾವಹಾರಿಕ ಪತ್ರ :* | |
| | ಇಂದ, ಗೆ, ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸ್ಥಳ, ದಿನಾಂಕ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ವಿನ್ಯಾಸ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |
| | ***ಅಥವಾ*** | |
| | *ವೈಯಕ್ತಿಕ ಪತ್ರ :* | |
| | ಇಂದ, ವಿಳಾಸ, ಸಂಬೋಧನೆ, ದಿನಾಂಕ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಗೆ ವಿಳಾಸ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ವಿನ್ಯಾಸ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |